ಪರಮೇಶ್ವರ್ ಮುಖ್ಯಮಂತ್ರಿ ಆಗಬಹುದು, ಖರ್ಗೆ ಪ್ರಧಾನಿ ಆಗಬಹುದು: ಆಂಜನೇಯ ಭವಿಷ್ಯ ▶5



ಕಾಂಗ್ರೆಸ್ ಮುಕ್ತವಾಯ್ತು, ಈಗ 'ಕಮ್ಯುನಿಸ್ಟ್ ಮುಕ್ತ ಭಾರತ' ಅಮಿತ್ ಶಾ ಗುರಿ ▶9



ಅಮೆರಿಕದಲ್ಲಿ ಎಸ
ಬಾಲಸುಬ್ರಮಣ
ಪಾಸ್‌ಪೋರ್ಟ್

ಮಂಗಳೂರು
ಗುರುವಾರ
6 ಏಪ್ರಿಲ್ 2017
ಸಂಪುಟ 39, ಸಂಚಿಕೆ 8
ಪುಟಗಳು 12+4
ಬೆಂಗಳೂರು-ಮಂಗಳೂರು
ಶಿವಮೊಗ್ಗ-ಹುಬ್ಬಳ್ಳಿ
ಬೆಲೆ ₹ 4.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

hosadiganthadaily @diganthaonline website www.hosadigantha.com diganthamlr@gmail.com REG.No.MNG / 121 / 2015-17 Posted at kodialbail P.O


## ಸಹ್ಯಾದ್ರಿ ಕಾಲೇಜ್ ಆವರಣದಲ್ಲಿ ನಡೆಯಲಿದೆ

# ಏ. 8, 9: ಜಿಪಿಎಲ್ ಕ್ರಿಕೆಟ್ ಟೂರ್ನಿ

▶ ದಿಗಂತ ವರದಿ: ಮಂಗಳೂರು, ಏ. 5

ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ಚರಿತ್ರೆಯಲ್ಲಿ ಮೊದಲ ಬಾರಿಗೆ ಐಪಿಎಲ್ ಮಾದರಿಯಲ್ಲಿ ಜಿಪಿಎಲ್ ಕ್ರಿಕೆಟ್ ಟೂರ್ನ್‌ಮೆಂಟ್-2017 ಏ. 8 ಮತ್ತು 9 ರಂದು ಮಂಗಳೂರಿನ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿರುವ ಹಚ್ಚ ಹಸುರಿನ ಕ್ರೀಡಾಂಗಣದಲ್ಲಿ ನಡೆಯಲಿದೆ. ಹೊನಲು ಬೆಳಕಿನ ಪಂದ್ಯಾಟದಲ್ಲಿ ಕರಾವಳಿ ಕರ್ನಾಟಕದಿಂದ ಒಟ್ಟು ಎಂಟು ತಂಡಗಳು ಪ್ರತಿಷ್ಟಿತ ಜಿಪಿಎಲ್ ಟ್ರೋಫಿಗಾಗಿ ಸೆಣಸಲಿವೆ.




ಏ. 8ರಂದು ಸಂಜೆ 5 ಗಂಟೆಗೆ ಮುಂಬೈ ಇಂಡಿಯನ್ ತಂಡದ ಸ್ಟಾರ್ ಆಟಗಾರ ಕಿಶೋರ್ ಕಾಮತ್ ವಿಶಿಷ್ಟ ಶೈಲಿಯಲ್ಲಿ ಪಂದ್ಯಾಟ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀನಿಧಿ ಬಿಲ್ಡರ್ಸ್‌ನ ಪ್ರಕಾಶ್ ಶೆಣೈ, ಸುಧಾಕರ್ ಕಾಮತ್, ಅನಂತ ಪೈ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಪ್ರಥಮ ಬಹುಮಾನ 1,55,555 ರೂಪಾಯಿ ನಗದಿನೊಂದಿಗೆ ಆಕರ್ಷಕ ಟ್ರೋಫಿ, ಮೊದಲ ರನ್ನರ್ ಅಪ್ 88,888 ರೂಪಾಯಿ ನಗದಿನೊಂದಿಗೆ ಆಕರ್ಷಕ ಟ್ರೋಫಿ, ಎರಡನೇಯ ರನ್ನರ್ ಅಪ್ 33,333 ರೂಪಾಯಿ ನಗದಿನೊಂದಿಗೆ ಆಕರ್ಷಕ ಟ್ರೋಫಿ ನೀಡಿ ಗೌರವಿಸಲಾಗುವುದು. ಸರಣಿಶ್ರೇಷ್ಠ ಆಟಗಾರನಿಗೆ ಸುಜುಕಿ ಅಧಿಕೃತ ಮಾರಾಟಗಾರರಾಗಿರುವ ಪೈ ಸೇಲ್ಸ್ ಪ್ರೈ ಲಿಮಿಟೆಡ್ ವತಿಯಿಂದ ಸುಜುಕಿ ಏಕ್ಸೆಸ್-125 ವಿಶೇಷ ಬಹುಮಾನ ನೀಡಲಾಗುವುದು. ಪ್ರತಿ ಪಂದ್ಯದ ಪಂದ್ಯಶ್ರೇಷ್ಠ ಆಟಗಾರನಿಗೆ ಅತ್ಯಾಧುನಿಕ ಮೊಬೈಲ್ ಫೋನ್, ಆಕರ್ಷಕ ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಗುವುದು. ಸರಣಿಯ ಉತ್ತಮ ದಾಂಡಿಗ, ಉತ್ತಮ ಎಸೆತಗಾರ, ಜನಮೆಚ್ಚಿದ ಉದಯೋನ್ಮುಖ ಆಟಗಾರನಿಗೆ ಅತ್ಯಾಧುನಿಕ ಮೊಬೈಲ್ ಫೋನ್, ಆಕರ್ಷಕ ನಗದು ಮತ್ತು ಟ್ರೋಫಿ ಮತ್ತು ಆಯೋಜಕರ ಆಯ್ಕೆಯ ಇತರ ಆಟಗಾರರಿಗೂ ವಿಶೇಷ ಬಹುಮಾನ ನೀಡಲಾಗುವುದು. ಪ್ರತಿಯೊಬ್ಬ ಆಟಗಾರನಿಗೂ ಜಿಪಿಎಲ್-2017ರ ನೆನಪಿನ ಕಾಣಿಕೆ ನೀಡಿ ಸತ್ಕರಿಸಲಾಗುವುದು.

ಪ್ರಸಿದ್ಧ ಕ್ಯಾಟರಿಂಗ್ ಕಾಮತ್ ಕೇಟರರ್ಸ್ ಅವರ ಮಸಾಲೆದೋಸೆ, ಸೆಟ್ ದೋಸೆಯ ಲೈವ್ ಕೌಂಟರ್, ಹೋಟೇಲ್ ಅನಮೋಲ್ ಅವರ ಚಿಕ್ಕು ಶೀರಾ, ಕುಸುಮ ಕ್ಯಾಟರರ್ಸ್ ಅವರ ನಾರ್ತ್ ಇಂಡಿಯನ್ ತಿಂಡಿ, ಕಿಣಿ ಕ್ಯಾಟರರ್ಸ್ ಅವರ ಸೇಮಿಗೆ-ದಾಳಿತೋವೆ, ಮಾಯಾ ಕ್ಯಾಟರರ್ಸ್‌ರವರ ವೆಜ್ ಗೀರೋಸ್ಟ್ ಮತ್ತು ಸ್ಪೆಶಲ್ ತಿಂಡಿ ತಿನಿಸುಗಳು, ಬಾಳ್ಳಿಯವರ ಪೋಡಿಗಳು, ಶ್ರೇಯಸ್ ಸ್ವೀಟ್ ಅವರ ಚಾಟ್ ಕೌಂಟರ್, ಕಾಕುಂಜಿಸ್ ನವರ ಅಮೇರಿಕನ್ ಸ್ವೀಟ್ ಕಾರ್ನ್, ಸ್ಪೆಶಲ್ ಚರುಂಬುರಿ, ಮಸಾಲೆ ಮ್ಯಾಗಿ, ಐಡಿಯಲ್ ಐಸ್‌ಕ್ರೀಂ, ಕಬ್ಬಿನ ಹಾಲು, ಸೋಡಾ ಶರಬತ್, ಪೈನಾಪಲ್ ಮತ್ತು ಪೊಳಲಿ ಕಲ್ಲಂಗಡಿ ಹಣ್ಣು, ಪಾಪ್ ಕಾರ್ನ್, ವೆಜ್ ಸ್ಯಾಂಡ್ ವಿಚ್ ಸಹಿತ ಅನೇಕ ಖ್ಯಾದಗಳು ಕ್ರಿಕೆಟ್ ನೋಡಲು ಬರುವ ಜಿಎಸ್‌ಬಿ ಬಂಧುಗಳಿಗೆ ಉಚಿತವಾಗಿ ನೀಡುವ ವ್ಯವಸ್ಥೆ ಮಾಡಲಾಗಿದೆ.

ಏ. 9 ರಂದು ರಾತ್ರಿ 8 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಮಂಜುನಾಥ ಭಂಡಾರಿ, ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಮ್ಯಾನೇಜ್‌ಮೆಂಟ್, ಎ ಬದ್ರಿನಾಥ ಕಾಮತ್, ಪ್ರಕಾಶ್ ಶೆಣೈ, ಬೋಳ ಪ್ರಭಾಕರ ಕಾಮತ್, ಜಗನ್ನಾಥ ಕಾಮತ್ ಸಹಿತ ಅನೇಕ ಉದ್ಯಮಿಗಳು, ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪಂದ್ಯಾಟದ ಪ್ರವರ್ತಕ ಮಂಗಳೂರು ನಗರ ದಕ್ಷಿಣ ಬಿಜೆಪಿ ಅಧ್ಯಕ್ಷ ಡಿ. ವೇದವ್ಯಾಸ ಕಾಮತ್ ತಿಳಿಸಿದ್ದಾರೆ.